# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 11 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ |
| ಉತ್ತರಿಸುವ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2024ರ ಸಿಇಟಿ ಪರೀಕ್ಷೆಗೆ ಎಷ್ಟು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು; ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; | 2024ನೇ ಸಾಲಿನಲ್ಲಿ ಸಿಇಟಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಒಟ್ಟು ಅಭ್ಯರ್ಥಿಗಳ ಸಂಖ್ಯೆ:3,49,654<br><br>ಸಿಇಟಿ ಪರೀಕ್ಷೆ ಬರೆದ ಒಟ್ಟು ಅಭ್ಯರ್ಥಿಗಳ ಸಂಖ್ಯೆ:3,10,563 |
| ಆ | ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಸಿಇಟಿ ಪರೀಕ್ಷೆಯಲ್ಲಿ ಎಷ್ಟು ಪಠ್ಯೇತರ ಪ್ರಶ್ನೆಗಳನ್ನು ಕೇಳಲಾಗಿತ್ತು; ಇದರಿಂದ ಉದ್ಭವಿಸಿದ ಸಮಸ್ಯೆಯನ್ನು ಹೇಗೆ ಪರಿಹರಿಸಲಾಗಿದೆ; | ಸರ್ಕಾರ ನೇಮಿಸಿದ ವಿಷಯ ತಜ್ಞರುಗಳು ದಿನಾಂಕ 23.04.2024ರಂದು ನೀಡಿದ ವರದಿಯ ಪ್ರಕಾರ ನಾಲ್ಕು ವಿಷಯಗಳ ಬಗ್ಗೆ ಪಠ್ಯಕ್ರಮದಿಂದ ಹೊರತಾದ ಒಟ್ಟು 50 ಪ್ರಶ್ನೆಗಳು ಇದ್ದವು. (ಭೌತಶಾಸ್ತ್ರ-09, ರಸಾಯನ ಶಾಸ್ತ್ರ-15, ಗಣಿತ-15 ಮತ್ತು ಜೀವಶಾಸ್ತ್ರ-09). ಸದರಿ ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಪ್ರಶ್ನೆಗಳಿಗೆ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ. |
| ಇ | ಪ್ರಶ್ನೆಗಳನ್ನು ಹೊಂದಿಸುವಲ್ಲಿ ಪಿ.ಯು ಇಲಾಖೆ ಮತ್ತು ಕೆ.ಇ.ಎ ನಡುವೆ ಸಮನ್ವಯದ ಕೊರತೆಗೆ ಕಾರಣವೇನು: ಕೈಬಿಟ್ಟ ಪಠ್ಯಕ್ರಮದಿಂದ ಪ್ರಶ್ನೆಪತ್ರಿಕೆ ರೂಪಿಸಿದವರು ಯಾರು; ಯಾರಿಂದ ಈ ಎಡವಟ್ಟು ನಡೆದಿದೆ ಎಂಬ ತನಿಖೆ ನಡೆಸಲಾಗಿದೆಯೇ' | ಪಠ್ಯಕ್ರಮದಿಂದ ಹೊರತಾಗಿರುವ ಪ್ರಶ್ನೆಗಳ ಕುರಿತು(out of syllabus) ಸವಿವರವಾದ ತನಿಖೆ ನಡೆಸಿ, ವರದಿ ಸಲ್ಲಿಸಲು ಶ್ರೀ ಡಿ.ಎನ್.ನರಸಿಂಹರಾಜು, ಅಪರ ಮುಖ್ಯ ಕಾರ್ಯದರ್ಶಿಗಳು (ಭಾ.ಆ.ಸೇ., ನಿವೃತ್ತ) ಇವರ ಏಕ ಸದಸ್ಯ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 173 ಟೆಇಸಿ 2024(P), ದಿನಾಂಕ:09.05.2024ರಲ್ಲಿ ರಚಿಸಲಾಗಿದೆ. |
| ಈ | ಘಟನೆಗೆ ಕಾರಣರಾದ ಅಧಿಕಾರಿಗಳನ್ನು ಸರ್ಕಾರ ಗುರುತಿಸಿದೆಯೇ; ಅವರ ವಿರುದ್ಧ ಕೈಗೊಂಡ ಕ್ರಮಗಳೇನು(ವಿವರಗಳನ್ನು ನೀಡುವುದು) | ಈಗಾಗಲೇ ಸಿಇಟಿ ಫಲಿತಾಂಶವು ಪ್ರಕಟಗೊಂಡಿದ್ದು, ಸೀಟ್ ಮ್ಯಾಟ್ರಿಕ್ಸ್ ಪ್ರಕಟಿಸುವ ಕಾರ್ಯವು ಜಾರಿಯಲ್ಲಿರುತ್ತದೆ. |

| | | |
|---|---|---|
| ಉ | ಭವಿಷ್ಯದಲ್ಲಿ ಇಂತಹ ಘಟನೆಗಳು ಮರು ಕಳಿಸದಂತೆ ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡವಾಗದಂತೆ ಸರ್ಕಾರ ಏನು ಕ್ರಮಕೈಗೊಂಡಿದೆ? | ಪ್ರಶ್ನೆ ಪತ್ರಿಕೆ ತಯಾರಿಸಲು, ಮೌಲ್ಯ ಮಾಪನ ಮಾಡಲು (ವಿವರಣಾತ್ಮಕ ಮತ್ತು ಬಹು ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಂತೆ) ಶ್ರೇಣಿಗಳನ್ನು ಅಂತಿಮಗೊಳಿಸಲು ಮತ್ತು ಇತ್ಯಾದಿಗಳ ಕುರಿತು ವಿವರವಾದ ಪ್ರಮಾಣಿಕ ಕಾರ್ಯಾಚರಣೆಯ ವಿಧಾನ (Standard Operating Procedure) ಕೈಗೊಳ್ಳಲು ಮುಂದಿನ ದಿನಗಳಲ್ಲಿ ಯಾವ ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬುದನ್ನು ಪರಾಮರ್ಶಿಸಲು ಮೇಲೆ ತಿಳಿಸಿದ ಏಕ ಸದಸ್ಯ ಸಮಿತಿಯನ್ನು ನೇಮಿಸಲಾಗಿದ್ದು, ಸದರಿ ಸಮಿತಿಯ ವರದಿಯಂತೆ ಕ್ರಮವಹಿಸಲಾಗುವುದು. |

ಸಂ:ಇಡಿ 355 ಟಿಇಸಿ 2024

(ಡಾ.ಎಂ.ಸಿ.ಸುಧಾಕರ್)
**ಉನ್ನತ ಶಿಕ್ಷಣ ಸಚಿವರು**

ಡಾ.ಎಂ.ಸಿ ಸುಧಾಕರ್ ಎಂ.ಡಿ.ಎಸ್
ಉನ್ನತ ಶಿಕ್ಷಣ ಸಚಿವರು